ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

# ನಿರ್ಮಲ ಭಾರತ್ ಅಭಿಯಾನ

ಸಂಖ್ಯೆ :ಗ್ರಾಅಪ/ರಾನೀನೈಮಿ/ನಿಭಾಅ/ಸುತ್ತೋಲೆ-22/2013-14 ದಿನಾಂಕ:10.07.2013

## ಸುತ್ತೋಲೆ

ವಿಷಯ: **NBA (ನಿರ್ಮಲ ಭಾರತ ಅಭಿಯಾನ) - Base Line Survey 2012ರ ಅಂಕಿ ಅಂಶಗಳು ಹಾಗೂ AIP 2013-14 ರನ್ನು ಗ್ರಾಮ ಸಭೆಯಲ್ಲಿ ಅನುಮೋದನೆ ಪ್ರಕ್ರಿಯೆ ಹಾಗೂ ಫಲಾನುಭವಿಗಳ ಅರ್ಜಿ ವಿಲೇವಾರಿ ಮಾರ್ಗಸೂಚಿ.**

ಉಲ್ಲೇಖ: (1) NBA (ನಿರ್ಮಲ ಭಾರತ ಅಭಿಯಾನ) – ಮಾರ್ಗಸೂಚಿಗಳು – 2012.

***

ನಿರ್ಮಲ ಭಾರತ ಅಭಿಯಾನವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವಾಗಿದ್ದು, 2013-14ನೇ ಸಾಲಿನ ಗುರಿಯನ್ನು ರಾಜ್ಯದ ಪ್ರತಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಏಕರೀತಿಯಲ್ಲಿ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ವಿಧಾನಗಳು:

### I. ಮೊದಲನೇ ಹಂತ:

**ಗ್ರಾಮಗಳ Base Line Survey 2012ರ ಅಂಕಿ ಅಂಶಗಳು ಹಾಗೂ AIP 2013-14 ರ ಅನುಮೋದನೆ ಪ್ರಕ್ರಿಯೆ:**

i. ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ವಿಶೇಷ ಗ್ರಾಮ ಸಭೆಯನ್ನು ದಿನಾಂಕ: 25-7-2013ರೊಳಗೆ ಕರೆಯಯವುದು

ii. ಗ್ರಾಮ ಸಭೆಯಲ್ಲಿ ಈಗಾಗಲೇ ತಮ್ಮ ಗ್ರಾಮ ಪಂಚಾಯಿತಿಗಳಲ್ಲಿ ನಡೆದ Base Line Survey 2012ರ ಅಂಕಿಅಂಶಗಳ ಸಂಪೂರ್ಣ ವಿವರಗಳನ್ನು ಸಭೆಯಲ್ಲಿ ಮಂಡಿಸುವುದು. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೆಳಕಂಡ ಮಾಹಿತಿ ಮಂಡಿಸಿ, ಚರ್ಚಿಸಿ ಅನುಮೋದನೆ ಪಡೆಯುವುದು. (ಬೇಸ್‌ಲೈನ್ ಸಮೀಕ್ಷೆ ಮಾಹಿತಿ Format ನಮೂನೆ – A & B ಲಗತ್ತಿಸಿದೆ.)

iii. ಗ್ರಾಮ ಸಭೆಯಲ್ಲಿ Base Line Survey 2012ರ ಮಾಹಿತಿ ಆಧಾರದ ಮೇಲೆ ತಯಾರಿಸಿದ 2013-14ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ (AIP) ವೈಯಕ್ತಿಕ ಶೌಚಾಲಯ ಹೊಂದದಿರುವ ಕುಟುಂಬಗಳ ಅಂಕಿಅಂಶವನ್ನು ತಯಾರಿಸಿ ಇದೇ ಗ್ರಾಮ ಸಭೆಯಲ್ಲಿ ಮಂಡಿಸಿ, ಚರ್ಚಿಸಿ ಅನುಮೋದನೆ ಪಡೆಯುವುದು. (ನಮೂನೆ – C ಲಗತ್ತಿಸಿದೆ.)

iv. ನಿರ್ಮಲ ಭಾರತ್ ಅಭಿಯಾನದ ಫಲಾನುಭವಿಗಳಿಗೆ ಒಂದು ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣಕ್ಕೆ ಕೆಳಕಂಡಂತೆ ನೀಡಲಾಗುವ ಅನುದಾನದ ವಿವರಗಳನ್ನು ಗ್ರಾಮ ಸಭೆಯಲ್ಲಿ ತಿಳಿಯಪಡಿಸುವುದು.

| | |
|---|---|
| MNREGA- ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಅರ್ಹರಿದ್ದಲ್ಲಿ):- | ರೂ.4500/- |
| ಕೇಂದ್ರ ಸರ್ಕಾರದ ಅನುದಾನ | ರೂ.3200/- |
| ರಾಜ್ಯ ಸರ್ಕಾರದ ಅನುದಾನ | ರೂ.1500/- |
| **ಒಟ್ಟು ಸರ್ಕಾರದಿಂದ ಫಲಾನುಭವಿಗೆ ನೀಡಲಾಗುವ ಮೊತ್ತ** | **ರೂ.9200/-** |
| ಫಲಾನುಭವಿಯ ವಂತಿಕೆ | ರೂ.800/- |
| **ಒಟ್ಟು ಮೊತ್ತ** | **ರೂ.10,000/-** |

v. ಸಭೆಯ ಪ್ರಾರಂಭದಲ್ಲಿ ನಿರ್ಮಲ ಭಾರತ್ ಅಭಿಯಾನದ ಯೋಜನೆ / ಉದ್ದೇಶ ಒಟ್ಟು ಮೊತ್ತ ನೈರ್ಮಲ್ಯದ ಅವಶ್ಯಕತೆ ಬಗ್ಗೆ ಸಭೆಗೆ ತಿಳಿಯಪಡಿಸಬೇಕು.

**ಗ್ರಾಮ ಸಭೆಯಲ್ಲಿ ಭಾಗವಹಿಸಬೇಕಾಗಿರುವವರ ಪಟ್ಟಿ:-**

a. ಗ್ರಾಮ ಪಂಚಾಯ್ತಿ ಅಧ್ಯಕ್ಷ, ಉಪಧ್ಯಕ್ಷ ಮತ್ತು ಸದಸ್ಯರು.
b. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿ
c. ಶಾಲಾ ಮತ್ತು ಅಂಗನವಾಡಿ ಶಿಕ್ಷಕರು
d. ಆಶಾ ಕಾರ್ಯಕರ್ತೆಯರು
e. ಸ್ವಚ್ಛತಾ ದೂತರು
f. MNREGA Social Audit ಗುಂಪಿನ ಸದಸ್ಯರು
g. ಗ್ರಾಮಸ್ಥರು
h. SHG ಗುಂಪಿನ ಸದಸ್ಯರು
i. ಭಾರತ್ ನಿರ್ಮಾಣ್ ದಳ ತಂಡದ ಸದಸ್ಯರು
j. ಜಲ ನಿರ್ಮಲ ಯೋಜನಾ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ ಸಂಯೋಜಕರು.

**vi ನಿರ್ಮಲ ಭಾರತ ಅಭಿಯಾನದ ಬರುವ ಘಟಕವಾರು ಕ್ರಿಯಾ ಯೋಜನೆಯನ್ನು ತಯಾರಿಸಿ ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.**

**II. ಗ್ರಾಮ ಪಂಚಾಯ್ತಿಯಲ್ಲಿ ನಿರ್ವಹಿಸಬೇಕಾದ ದಾಖಲೆಗಳು:- (ದಾಖಲೆ ನಿರ್ವಹಣೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಪೂರ್ಣ ಜವಬ್ದಾರರಾಗಿರುತ್ತಾರೆ.)**

**ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಜವಾಬ್ದಾರಿಗಳು (ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಹುದ್ದೆ ಖಾಲಿ ಇದ್ದಲ್ಲಿ, ಆ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಇರುವ ಅಧಿಕಾರಿ ಸದರಿ ಕಾರ್ಯಗಳ ನಿರ್ವಹಣೆಯ ಜವಾಬ್ದಾರರಾಗಿರುತ್ತಾರೆ.)**

i. ವಿಶೇಷ ಗ್ರಾಮ ಸಭೆಯನ್ನು **ದಿನಾಂಕ.25.07.2013ರೊಳಗೆ** ಪೂರ್ಣಗೊಳಿಸಿ, ನಡವಳಿಯನ್ನು ಗ್ರಾಮ ಸಭೆ ಯಲ್ಲಿ ಬರೆಯಬೇಕು ಹಾಗೂ ಆ ದಿನವೇ ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕು.

ii. ಗ್ರಾಮವಾರು ಗ್ರಾಮ ಸಭೆಯಲ್ಲಿ ಅನುಮೋದಿತ **Base Line Survey** 2012ರ ಅಂಕಿ ಅಂಶಗಳ ಮಾಹಿತಿಯನ್ನು ಕ್ರೋಢೀಕರಿಸಿ, ಪುಸ್ತಕವನ್ನು ತಯಾರಿಸುವುದು. ಪುಸ್ತಕದಲ್ಲಿ ಗ್ರಾಮ ಸಭೆಯಲ್ಲಿ ಅನುಮೋದಿತ ನಡವಳಿ ದಾಖಲಾಗಿರಬೇಕು, ಈ ಪುಸ್ತಕದ ಪ್ರತಿಯನ್ನು ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ನೀಡಬೇಕು. ಒಂದು ಪ್ರತಿಯನ್ನು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಇಡಬೇಕು. (ನಮೂನೆ – A & B ಲಗತ್ತಿಸಿದೆ)

iii. ಪಂಚಾಯತ್ ಅಭಿವೃದ್ಧಿ ಅಧಿಕಾರಿಯು 2013–14ನೇ ಸಾಲಿನ ಅನುಮೋದಿತ AIP ಗ್ರಾಮವಾರು ಅಂಕಿಅಂಶವನ್ನು ತಯಾರಿಸುವುದು ಹಾಗೂ ಪುಸ್ತಕದಲ್ಲಿ ಗ್ರಾಮ ಸಭೆಯ ನಡವಳಿ ದಾಖಲಾಗಿರಬೇಕು.. ಈ ರೀತಿ 2013–14ನೇ ಸಾಲಿನ ಅನುಮೋದಿತ AIP ಗ್ರಾಮವಾರು ಕ್ರೋಢೀಕರಿಸಿದ ಪುಸ್ತಕದ ಪ್ರತಿಯನ್ನು ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ನೀಡಬೇಕು, ಹಾಗೂ ಒಂದು ಪ್ರತಿಯನ್ನು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಇಡಬೇಕು.

iv. ಈ ಪ್ರಕ್ರಿಯೆಗೆ ಕರೆಯಲಾದ ಗ್ರಾಮ ಸಭೆಯ ಚಿತ್ರೀಕರಣ (ವಿಡಿಯೋಗ್ರಫಿ) ಮತ್ತು ಭಾವಚಿತ್ರಗಳನ್ನು (ಫೋಟೋಗ್ರಫಿ) ಮಾಡಿಸಬೇಕು. ಸದರಿ ಗ್ರಾಮ ಸಭೆಯ ಒಂದೊಂದು ಸಿಡಿ ಪ್ರತಿಯನ್ನು ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ನೀಡಬೇಕು. ಭಾವಚಿತ್ರಗಳನ್ನು ಹಾಗೂ ಗ್ರಾಮ ಸಭೆಯ ನಡವಳಿಯನ್ನು ಪಂಚತಂತ್ರದ ತಂತ್ರಾಂಶನಲ್ಲಿ ಅಪ್‌ಲೋಡ್ ಮಾಡಬೇಕು.

**(ಸೂಚನೆ:– ರಾಜೀವ್‌ಗಾಂಧೀ ಗ್ರಾಮೀಣ ಗೃಹ ನಿರ್ಮಾಣ ನಿಗಮ ನಿಯಮಿತ (RGHCL) ನೀಡಿರುವ GPS Handset ಬಳಸಿ ಎಲ್ಲಾ ಭಾವಚಿತ್ರವನ್ನು ತೆಗೆಯಬೇಕು. ಭಾವಚಿತ್ರಗಳಲ್ಲಿ GPS Co-ordinates, ದಿನಾಂಕ ಮತ್ತು ಸಮಯ ನಮೂದಾಗಿರಬೇಕು. ಭಾವಚಿತ್ರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಫಲಾನುಭವಿಗಳ ಜೊತೆಗಿನ ಭಾವಚಿತ್ರ ತೆಗೆಸಿ ಕಡತದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.)**

v. ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ವಿಶೇಷ ಗ್ರಾಮ ಸಭೆ ನಡೆಸುವ ವಿಷಯ ಕುರಿತಂತೆ ಸ್ಥಳೀಯ ದಿನಪತ್ರಿಕೆ/ ಸ್ಥಳೀಯ ಮಾಧ್ಯಮ ವರದಿಗಾರರಿಗೆ ಮಾಹಿತಿ ನೀಡುವುದು

**ಈ ಮೇಲಿನ ಎಲ್ಲಾ ಪೂರ್ಣ ಪ್ರಕ್ರಿಯೆಗಳು ದಿನಾಂಕ:25–7–2013ರೊಳಗೆ ಮುಕ್ತಾಯಗೊಳಿಸಬೇಕು.**

**ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರ ವಿಶೇಷ ಸೂಚನೆ:–**

i. ವಿಶೇಷ ಗ್ರಾಮ ಸಭೆಯ ಮಂಜೂರಾತಿ ಪ್ರಕ್ರಿಯೆ ಕುರಿತಂತೆ ನಿಗದಿತ ನಮೂನೆಯೊಂದಿಗೆ ಗ್ರಾಮಸ್ಥರುಗಳಿಗೆ ವಿವರವಾಗಿ ತಿಳಿಸುವ ಜವ್ಬಾರಿಯು / ಕಾರ್ಯವು ಪಂಚಾಯತ್ ಅಭಿವೃದ್ಧಿ

ಅಧಿಕಾರಿ, ಗ್ರಾಮ ಪಂಚಾಯ್ತಿ ಅಧ್ಯಕ್ಷರು ಹಾಗೂ ಸದಸ್ಯರದ್ದಾಗಿರುತ್ತದೆ. ಈ ಪ್ರಕ್ರಿಯೆಯನ್ನು ಮೊದಲನೇ ಹಂತದ IEC activity ಎಂದು ಪರಿಗಣಿಸುವುದು.

ii. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಈ ವಿಶೇಷ ಗ್ರಾಮ ಸಭೆ ನಡೆಸುವುದಕ್ಕೆ ಪ್ರತಿ ಗ್ರಾಮ ಪಂಚಾಯ್ತಿಗೆ ರೂ. 3000/- ರಂತೆ ಖರ್ಚು ಮಾಡಲು ಅವಕಾಶವಿದ್ದು, ಸದರಿ ವೆಚ್ಚವನ್ನು ಗ್ರಾಮ ಪಂಚಾಯತಿಗೆ ಜಿಲ್ಲೆಯ NBA-IEC ವೆಚ್ಚದಲ್ಲಿ ಈ ಸುತ್ತೋಲೆ ತಲುಪಿದ 02 (ಎರಡು) ದಿನಗಳೊಳಗೆ ಆನ್‌ಲೈನ್ (NEFT) ಮುಖಾಂತರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಗ್ರಾಮ ಪಂಚಾಯ್ತಿಗೆ ಬಿಡುಗಡೆಗೊಳಿಸಲು ಕ್ರಮವಹಿಸುವುದು.

## III. ಎರಡನೇ ಹಂತ:

**ಗ್ರಾಮ ಪಂಚಾಯ್ತಿಯಲ್ಲಿ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಅರ್ಜಿಗಳ ವಿಲೇವಾರಿ**

**A. ಫಲಾನುಭವಿಗಳ ಅರ್ಜಿಗಳ ವಿಲೇವಾರಿ ಪ್ರಕ್ರಿಯೆ**

i. ಫಲಾನುಭವಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಸ್ವೀಕಾರ (ನಮೂನೆ -1 ಲಗತ್ತಿಸಿದೆ)

ii. ಸ್ವೀಕೃತಗೊಂಡ ಅರ್ಜಿಗಳ ವಿವರಗಳನ್ನು ಸ್ವೀಕೃತಿ ವಹಿ (Inward Register) ಯಲ್ಲಿ ದಾಖಲಿಸಬೇಕು.

iii. ಅರ್ಜಿ ನೀಡಿದ ಫಲಾನುಭವಿಗಳಿಗೆ ನಿಗದಿತ ನಮೂನೆಯಲ್ಲಿ ಸ್ವೀಕೃತಿಯನ್ನು ನೀಡಬೇಕು. ಸ್ವೀಕೃತಿಯ ಒಂದು ಪ್ರತಿಯನ್ನು ಅರ್ಜಿದಾರರಿಗೆ ತೆರೆಯಲಾಗಿರುವ ಕಡತದಲ್ಲಿ ನಿರ್ವಹಿಸಬೇಕು. (ನಮೂನೆ -2 ಲಗತ್ತಿಸಿದೆ)

iv. ಫಲಾನುಭವಿಗಳು ನೀಡಿದ ಅರ್ಜಿಯ ಮಾಹಿತಿಯನ್ನು ಅನುಮೋದಿತ AIP ದೊಂದಿಗೆ ಪರಿಶೀಲಿಸಿ ಅರ್ಹವಿದ್ದಲ್ಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಮೂರು (03) ದಿನಗಳೊಳಗಾಗಿ ಮೊದಲನೇ ಹಂತದ ಸ್ಥಳ ಪರಿಶೀಲನೆ ನಡೆಸುವುದು. (ಮೊದಲನೇ ಹಂತದ ಸ್ಥಳ ಪರಿಶೀಲನೆಯ checklist ನ್ನು ನಮೂನೆ-3 ರಲ್ಲಿ ನೀಡಿದೆ.) ಸ್ಥಳ ಪರಿಶೀಲನಾ ವರದಿಯೊಂದಿಗೆ **ರಾಜೀವ್‌ಗಾಂಧೀ ಗ್ರಾಮೀಣ ಗೃಹ ನಿರ್ಮಾಣ ನಿಗಮ ನಿಯಮಿತ (RGHCL) ನೀಡಿರುವ GPS Handset ಬಳಸಿ ಎಲ್ಲಾ ಭಾವಚಿತ್ರವನ್ನು ತೆಗೆಯಬೇಕು. ಭಾವಚಿತ್ರಗಳಲ್ಲಿ GPS Co-ordinates, ದಿನಾಂಕ ಮತ್ತು ಸಮಯ ನಮೂದಾಗಿರಬೇಕು. ಭಾವಚಿತ್ರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಫಲಾನುಭವಿಗಳ ಜೊತೆಗಿನ ಭಾವಚಿತ್ರ ತೆಗೆಸಿ ಕಡತದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.**

v. ಫಲಾನುಭವಿ ನೀಡಿದ ಅರ್ಜಿಯ ಮಾಹಿತಿ ಅನುಮೋದಿತ ಬೇಸ್‌ಲೈನ್ AIP ಯೊಂದಿಗೆ ಪರಿಶೀಲಿಸಿ ಅರ್ಹವಿಲ್ಲದಿದ್ದಲ್ಲಿ ಅರ್ಜಿದಾರನಿಗೆ ಸೂಕ್ತ ಹಿಂಬರಹ ನೀಡುವುದು. ಮತ್ತು ಕಡತದಲ್ಲಿ ಕಾರಣಗಳನ್ನು ದಾಖಲಿಸುವುದು.

vi. ಕ್ರಮ ಸಂಖ್ಯೆ iv ರಂತೆ ಅರ್ಹ ಅರ್ಜಿದಾರರ ಪ್ರಸ್ತಾವನೆಯ ಸ್ಥಳ ಪರಿಶೀಲನೆ ಮಾಡಿದ ನಂತರ ಸ್ಥಳವು ಸೂಕ್ತವೆಂದು ಪರಿಗಣಿಸಿದಲ್ಲಿ, ಮಂಜೂರಾತಿ ಆದೇಶವನ್ನು ಒಂದು (01) ದಿನಗಳೊಳಗಾಗಿ ಹೊರಡಿಸುವುದು. ಹೊರಡಿಸಿದ ಮಂಜೂರಾತಿ ಆದೇಶದ ಪ್ರತಿಯನ್ನು

ಫಲಾನುಭವಿಗೆ ನೀಡುವುದು. ಫಲಾನುಭವಿಗೆ ನೀಡಿದ ಮಂಜೂರಾತಿ ಆದೇಶದ ನಕಲು ಪ್ರತಿಯನ್ನು ಅವರ ಹೆಸರಿನಲ್ಲಿ ತೆರೆಯಲ್ಪಟ್ಟ ಕಡತದಲ್ಲಿ ದಾಖಲಿಸುವುದು (Sanction Order- ನಮೂನೆ- 4 ಲಗತ್ತಿಸಿದೆ)

vii. ಈ ರೀತಿ ಮಂಜೂರಾತಿ ಆದೇಶ ನೀಡಿದ 10 ದಿನಗಳ ನಂತರ, ಮೊದಲನೇ ಹಂತದ ಕಾಮಗಾರಿಯ ಸ್ಥಳ ಪರಿಶೀಲನೆ ನಡೆಸುವುದು. ಸ್ಥಳ ಪರಿಶೀಲನಾ ಸಮಯದಲ್ಲಿ **ರಾಜೀವ್‌ಗಾಂಧೀ ಗ್ರಾಮೀಣ ಗೃಹ ನಿರ್ಮಾಣ ನಿಗಮ ನಿಯಮಿತ (RGHCL)** ನೀಡಿರುವ **GPS Handset** ಬಳಸಿ ಎಲ್ಲಾ ಭಾವಚಿತ್ರವನ್ನು ತೆಗೆಯಬೇಕು. ಭಾವಚಿತ್ರಗಳಲ್ಲಿ **GPS Co-ordinates,** ದಿನಾಂಕ ಮತ್ತು ಸಮಯ ನಮೂದಾಗಿರಬೇಕು. **ಭಾವಚಿತ್ರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಫಲಾನುಭವಿಗಳ ಜೊತೆಗಿನ ಭಾವಚಿತ್ರ ತೆಗೆಸಿ ಕಡತದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.** (ನಿಗದಿತ ನಮೂನೆಯಲ್ಲಿ – ನಮೂನೆ – 5)

viii. ಫಲಾನುಭವಿಗಳು, ಮಂಜೂರಾತಿ ಆದೇಶದ ಪತ್ರದಲ್ಲಿ ಸೂಚಿಸಿರುವಂತೆ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದಲ್ಲಿ, ನಿಗದಿತ ನಮೂನೆಯಲ್ಲಿ ನೋಟೀಸ್‌ನ್ನು ನೀಡುವುದು. ನೋಟೀಸ್ ನೀಡಿದ ಪಕ್ಷದಲ್ಲಿ, ಅದರ ಪ್ರತಿಯನ್ನು ಕಡತದಲ್ಲಿ ದಾಖಲಿಸುವುದು. (ನಮೂನೆ–6)

ix. ಪೂರ್ಣಗೊಳಿಸಿರುವ ಶೌಚಾಲಯ ಕಾಮಗಾರಿಯ ಅಂತಿಮ ಹಂತದ ಪರೀವೀಕ್ಷಣೆ (ನಿಗದಿತ ನಮೂನೆ–7) ಮಂಜೂರಾತಿ ಆದೇಶದಲ್ಲಿ ಸೂಚಿಸಿರುವ ಅವಧಿಯಲ್ಲಿ ಪರಿಶೀಲಿಸುವುದು. ಕಾಮಗಾರಿ ಪೂರ್ಣಗೊಂಡ ವಿವರ ಹಾಗೂ **ರಾಜೀವ್‌ಗಾಂಧೀ ಗ್ರಾಮೀಣ ಗೃಹ ನಿರ್ಮಾಣ ನಿಗಮ ನಿಯಮಿತ (RGHCL) ನೀಡಿರುವ GPS Handset ಬಳಸಿ ಎಲ್ಲಾ ಭಾವಚಿತ್ರವನ್ನು ತೆಗೆಯಬೇಕು. ಭಾವಚಿತ್ರಗಳಲ್ಲಿ GPS Co-ordinates, ದಿನಾಂಕ ಮತ್ತು ಸಮಯ ನಮೂದಾಗಿರಬೇಕು. ಭಾವಚಿತ್ರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಫಲಾನುಭವಿಗಳ ಜೊತೆಗಿನ ಭಾವಚಿತ್ರ ತೆಗೆಸಿ ಕಡತದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.**

**B.** ಹಣ ಪಾವತಿ ಪ್ರಕ್ರಿಯೆ:

i. ಕಾಮಗಾರಿ ಪೂರ್ಣಗೊಂಡ ನಂತರ, ಸ್ಥಳ ಪರಿಶೀಲನೆಯಿಂದ ಫಲಾನುಭವಿಯು ಶೌಚಾಲಯದ ಕಾಮಗಾರಿಯನ್ನು ಪೂರ್ಣಗೊಳಿಸಿರುವುದನ್ನು ದೃಢಪಡಿಸಿಕೊಂಡು, ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ ಪ್ರೋತ್ಸಾಹಧನವಾದ **ರೂ.4700/–**ಗಳ ಮಂಜೂರಾತಿ ಕುರಿತಂತೆ, ಚೆಕ್ಕನ್ನು ಅಧ್ಯಕ್ಷರ ಸಹಿಗಾಗಿ ಮಂಡಿಸುವುದು. (ಅಂತಿಮ ಹಂತದ ಪರಿವೀಕಷಣೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ)

ii. ಅಧ್ಯಕ್ಷರ ಅನುಮೋದನೆ ಪಡೆದು, ಚೆಕ್ಕನ್ನು 01 ದಿನದಲ್ಲಿ ಫಲಾನುಭವಿಗೆ ನೀಡಿ ಅವರಿಂದ ಸ್ವೀಕೃತಿ ಪಡೆದು ಕಡತದಲ್ಲಿ ದಾಖಲಿಸುವುದು.

iii. ಹಣ ಪಾವತಿ ಮಾಡಿದ ಫಲಾನುಭವಿಗಳ ಬಳಕೆ ಪ್ರಮಾಣ ಪತ್ರ (Utilization Certificate) ವನ್ನು ಅವುಗಳ ವಿವರಗಳೊಂದಿಗೆ, ಪ್ರತಿ ತಿಂಗಳು 25ನೇ ತಾರೀಖಿನೊಳಗಾಗಿ, ಒಂದೊಂದು ಪ್ರತಿಯನ್ನು ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಕಡ್ಡಾಯವಾಗಿ ಕಳುಹಿಸಬೇಕು.

**ವಿಶೇಷ ಸೂಚನೆ:**

1) MGNREGA ಬೇಸ್‌ಲೈನ್ ಸರ್ವೆ 2013-14ರ ಕ್ರಿಯಾಯೋಜನೆಯಡಿಯಲ್ಲಿ ಅರ್ಹವಿರುವ ಫಲಾನುಭವಿಗಳಿಗೆ MGNREGA ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

**C. ಗೋಡೆ ಬರಹ ಬರೆಸುವ ಕುರಿತು ಮಾರ್ಗಸೂಚಿಗಳು:- (ನಮೂನೆ - 8 ಲಗತ್ತಿಸಿದೆ)**

1. ಬೇಸ್ ಲೈನ್ ಸರ್ವೆ ಪ್ರಗತಿಯ ಮಾಹಿತಿಯ ನಮೂನೆಯು ಹಸಿರು ಬಣ್ಣದಲ್ಲಿರಬೇಕು.
2. 2013-14ನೇ ಸಾಲಿಗೆ ನಿಗದಿಪಡಿಸಿದ ಗುರಿಯ ನಮೂನೆಯು ಕೆಂಪು ಬಣ್ಣದಲ್ಲಿರಬೇಕು.
3. 2013-14ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿಯ ನಮೂನೆಯು ಹಳದಿ ಬಣ್ಣದಲ್ಲಿರಬೇಕು,
4. ಗೊಡೆ ಬರಹ ಬ್ಯಾಗ್ರೌಂಡ್ ಬಿಳಿಬಣ್ಣವನ್ನು ಹೊಂದಿರಬೇಕು,
5. ಗೊಡೆ ಬರಹದ ವಿಸ್ತೀರ್ಣ 4x6 ಆಗಿದ್ದು ಇದಕ್ಕೆ ರೂ.1680/- (ಒಂದು ಅಡಿಗೆ ರೂ.70) ಅಥವಾ 3x5 ಆಗಿದಲ್ಲಿ ಇದಕ್ಕೆ ರೂ.1050/-
6. ಗೋಡೆ ಬರಹವನ್ನು ಪ್ರಮುಖವಾಗಿ ಗ್ರಾಮ ಪಂಚಾಯಿತಿ, ಕಟ್ಟಡ, ಕಾಂಪೋಂಡ್, ಶಾಲಾ ಕಾಂಪೋಂಡ್ ರೇಷನ್ ಅಂಗಡಿ, ಬಸ್ ನಿಲ್ದಾಣ, ಅಂಗನವಾಡಿ ಕಟ್ಟಡ ಮತ್ತು ಇತರೆ ಸೂಕ್ತ ಸ್ಥಳಗಳಲ್ಲಿ (ಗ್ರಾಮ ಪಂಚಾಯಿತಿಯ ಕನಿಷ್ಠ 3 ಸ್ಥಳಗಳಲ್ಲಿ)
7. ವೆಚ್ಚವನ್ನು ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಐ ಇ ಸಿ ವೆಚ್ಚದಲ್ಲಿ ಬರಿಸುವುದು.

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮೇಲೆ ಸೂಚಿಸಿರುವ ಗೋಡೆ ಬರಹದ ಕಾರ್ಯವನ್ನು IEC ಚಟುವಟಿಕೆ ಎಂದು ಪರಿಗಣಿಸಿ ಅದಕ್ಕೆ ತಗಲುವ ವೆಚ್ಚವನ್ನು ಪ್ರತಿ ಗ್ರಾಮ ಪಂಚಾಯ್ತಿಗೆ ರೂ.10,000/- ಗಳನ್ನು (NEFT) ಆನ್‌ಲೈನ್ ಬಿಡುಗಡೆ ಮಾಡುವುದು. ಪ್ರತಿ ಗ್ರಾಮ ಪಂಚಾಯಿತಿಗಳು ಖರ್ಚಾಗಿರುವ ಬಗ್ಗೆ ಹಣಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾ ಪಂಚಾಯತಿಗೆ ಸಲ್ಲಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಗಳು ಸಲ್ಲಿಸಿರುವ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸಿದ ನಂತರ ಆಯ್ದ ಪಂಚಾಯತಿಗಳಲ್ಲಿ ಪರಿಶೀಲನೆ ನಡೆಸುವುದು.

**(ಡಾ.ಜೆ.ರವಿಶಂಕರ್)**
ಮಿಷನ್ ನಿರ್ದೇಶಕರು
ರಾ.ನೀ.ನೈ.ಮಿಷನ್ ಹಾಗೂ ಸರ್ಕಾರದ
ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು,
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ರವರಿಗೆ,**

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಎಲ್ಲಾ ಜಿಲ್ಲಾ ಪಂಚಾಯತ್.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861/62 : - ಫ್ಯಾಕ್ಸ್ :-22221862 E-mail : wsrdpr@gmail.com